## ಪ್ರ ದ ನ್ಯಾದಂಡಾಧಿಕಾರಿಗಳ ನ್ಯಾಯಾಲಯ, ಕುಶಾಲನಗರ

## ಸಿ ಸಿ ನಂಃ 1033/2023

ಸಾಕ್ಷಿಯ ಹೆಸರು: ಪ್ರವೀಣ ಬಿ ವಿ

ಪ್ರಾಸಾ ಃ 8

ತಂದೆ / ಗಂಡನ ಹೆಸರು : ಲೇಟ ವಾಸು

ಚಾಸಾ ಃ 14

ವಯಸ್ಸು : 46

ಉದ್ಯೋಗ : ಮುಖ್ಯ ಪೇದೆ

ವಾಸ ಸ್ಥಳ : ಗೋಣಿಕೊಪ್ಪ

**ಸಾಕ್ಷಿಗೆ ಪ್ರಮಾಣ ವಚನವನ್ನು ಬೋಧಿಸಿ ಪ್ರಮಾಣೀಕರಿಸಿದ ದಿಃ 09.03.2026**

**ಮುಖ್ಯ ವಿಚಾರಣೆಃ ಎ ಪಿ ಪಿ ಯವರಿಂದ**

ನಾನು 2019 ಜನವರಿ ರಿಂದ ಜುಲೈ 2024 ರವರೆಗೆ ಕುಶಾಲನಗರ ಗ್ರಾಮಾಂತರ ಪೋಲಿಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿಃ 23.06.2023 ರಂದು ನಾನು ಕುಶಾಲನಗರ ಗ್ರಾಮಂ ಾತ ಪೋಲಿಸ್ ಠಾಣ ಪ್ರಭಾರದಲ್ಲಿದ್ದಾಗ ಕುಶಾಲನಗರ ಸರಕಾರ ಆಸ್ಪತ್ರೆಯಿಂದ ರಾತ್ರಿ 10.00 ಗಂಟೆಗೆ ಮಾಹಿತಿ ಬಂದಿದ್ದು ಅದರಂತೆ ನಾನು ಕುಶಾಲನಗರ ಸರಕಾರಿ ಆಸ್ಪತ್ರೆಗೆ ಹೋಗಿ ಒಳರೋಗಿಯಾಗಿ ಚಿಕಿತ್ಸೆ ಪಡೆಯುತ್ತಿದ್ದ ಚಾಸ 1 ರವರ ಲಿಖಿತ ಪುಕಾರನ್ನು ಪಿರ್ಯಾದಿದಾರರ ಹೆಂಡತಿಯವರಾದ ಚಾಸಾ 8 ರವರು ಬರೆದಿದ್ದು ಅದನ್ನು ಹೊಂದಿಕೊಂಡು ಠಾಣೆಗೆ ವಾಪಸಾಗಿ ಸಮಯ ರಾತ್ರಿ 11.45 ಗಂಟೆಗೆ ಮೊ ಸಂ 73/2023 ರಂತೆ ಪ್ರಕರಣವನ್ನು ದಾಖಲಿಸಿ ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುತ್ತೇನೆ.

ದಿಃ 26.06.2023 ರಂದು ಚಾಸಾ 1 ರವರು ಜಿಲ್ಲಾ ಸರಕಾರಿ ಆಸ್ಪತ್ರೆಗೆ ಮಡಿಕೇರಿಯಲ್ಲಿ ಚಿಕಿತ್ಸೆ ಪಡೆದು ಹಾಜರಾಗಿದ್ದು ಅವರ ಮರು ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ನಂತರ ಕೃತ್ಯ ಸ್ಥಳ ಮಹಜರನ್ನು ಜರುಗಿಸುವ ಸಲುವಾಗಿ ಕೃತ್ಯ ಸ್ಥಳಕ್ಕೆ ಹೋಗಿ ಚಾಸಾ 1 ರವರು ಅಲ್ಲಿ ಹಾಜರಿದ್ದು ಪಂಚರಾದ ಚಾಸಾ 2 ಮತ್ತು 3 ರವರನ್ನು ಬರಮಾಡಿಕೊಂಡು ಅವರಿಗೆ ಪ್ರಕರಣವನ್ನು ವಿಚಾರವನ್ನು ತಿಳಿಸಿ ನೋಟಿಸನ್ನು ಜಾರಿ ಮಾಡಿ ಸಮಯ 17.30 ರಿಂದ 18.45 ರವೆರೆಗೆ ಮಹಜರ ಕ್ರಮ ಜರುಗಿಸಲಾಯಿತು. ಈ ಸಮಯದಲ್ಲಿ ಚಾಸಾ 1 ರವರು ಒಂದು ಹಿಡಿ ಗಾತ್ರ ಕಲ್ಲನ್ನು ಹಾಜರುಪಡಿಸಿದ್ದು ಸದರಿ ಕಲ್ಲನ್ನು ಪಂಚರ ಸಮಕ್ಷಮ ಅಮಾನತ್ತು ಪಡಿಸಿಕೊಂಡಿರುತ್ತೇನೆ. ಕೃತ್ಯ ಸ್ಥಳ ಕಚ್ಚಾ ನಕಾಶೆಯನ್ನು ಹಾಗೂ ಫೋಟೋವನ್ನು ತಯಾರಿಸಿರುತ್ತೇನೆ. ನಂತರ ಠಾಣೆಗೆ ವಾಪಸು ಆಗಿ ಠಾಣಾ ಮೊ ಮಾ ಸಂ 110/2023 ರಂತೆ ನೊಂದಾಯಿತಿ ಮಾನ್ಯ ನ್ಯಾಯಾಲಯಕ್ಕೆ ಸಲ್ಲಿಸಿರುತ್ತೆನೆ.

ಚಾಸಾ 2 ಮತ್ತು 3 ರವರ ಹೇಳಿಕೆಂನುನ್ನು ಪಡೆದುಕೊಂಡಿರುತ್ತೇನೇ. ಅದೆ ದಿನ ಚಾಸಾ 8 ರಿಂದ 10 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿಃ 27.06.2023 ರಂದು ಈ ಪ್ರಕರಣದ ಆರೋಪಿಗೆ ಕಲಂ 41 ಎ ಸಿ ಆರ್ ಪಿ ಸಿ ಅಡಿಯಲ್ಲಿ ನೋಟಿಸು ಜಾರಿ ಮಾಡಿರುತ್ತೇನೆ. ದಿಃ 01.07.2023 ರಂದು ಚಾಸಾ 1 ರವರ ಗಾಯದ ದೃಡೀಕರಣ ಪತ್ರವನ್ನು ಕೋರಿ ವೈದ್ಯಾದಿಕಾರಿಗಳಿಗೆ ಮನವಿ ಪತ್ರ ಕಳಹಿಸಿಕೊಟ್ಟಿರುತ್ತೇನೆ. ಅದೆ ದಿನ ತೊರೆನೂರು ಪಂಚಾಯಿತಿ ಅಬಿವೃದ್ದಿ ಅಧಿಕಾರಿಗಳಿಗೆ ಚಾಸಾ 1 ರವರ ಹಾಗೂ ಆರೋಪಿಯ ವಾಸದ ಮನೆ ಇರುವ ಬಗ್ಗೆ ದೃಡೀಕರಣ ಪತ್ರ ಹಾಗು ಘಟನಾ ಸ್ಥಳ ನಡೆದಲ್ಲಿ ಸಾರ್ವಜನಿಕರ ರಸ್ತೆ ಇರುವ ಬಗ್ಗೆ ದೃಡೀಕರಣ ಪತ್ರವನ್ನು ಕಳುಹಿಸಿಕೊಟ್ಟಿರುತ್ತೇನೆ.

ದಿಃ 09.07.2023 ರಂದು ಆರೋಪಿ ಯು ಮಾನ್ಯ ನ್ಯಾಯಾಲಯದಿಂದ ಜಾಮೀನು ಪಡೆದು ಠಾಣೆಗೆ ಹಾಜರಾಗಿದ್ದು ದಸ್ತ ಕ್ರಮ ಅನುಸರಿಸಿ ಠಾಣಾ ಜಾಮಿನೀನ ಮೆಎೀಲೆ ಬಿಡುಗಡೆ ಮಾಡಿರುತ್ತೇನೆ. ಅದೆ ವೇಳೆಯಲ್ಲಿ ಸ್ವಇಚ್ಛಾ ಹೇಳಿಕೆಯನ್ನು ಪಡೆದಿರುತ್ತೇನೆ. ಕೃತ್ಯಕ್ಕೆ ಬಳಸಿದ ಸ್ಕೂಟರನ್ನು ಹಾಜರುಪಡಿಸಲು ನೊಟಸನ್ನು ಜಾರಿ ಮಾಡಿರುತ್ತೇನೆ. ಆರೋಪಿಯು ಸ್ಕೂಟರನ್ನು ಠಾಣಾ ಆವರಣದಲ್ಲಿ ಅದೆ ದಿನ ತಂದು ಹಾಜರುಪಡಿಸಿದ್ದು ಅಮಾನತ್ತು ಮಹಜರನ್ನು ಚಾಸಾ 4 ಮತ್ತು 5 ರವರ ಸಮಕ್ಷಮ ಸಮಯ ಬೆಳಗ್ಗೆ 11.45 ರಿಂದ 12.30 ಗಂಟೆಯವರೆಗೆ ಬರೆದಿರುತ್ತೇನೆ. ಅದೆ ವೇಳೆಯಲ್ಲಿ ಕೃತ್ಯಕ್ಕೆ ಬಳಿಸಿದ ಕೆ ಎ 12 ಕ್ಯೂ 1470 ರ ಬಿಳಿ ಬಣ್ಣದ ಆಕ್ಟೀವ ಹೊಂಡ ಸ್ಕುಟರನ್ನು ಅಮಾನತ್ತು ಪಡಿಸಿಕೊಂಡಿರುತ್ತೇನೆ. ನಂತರ ಠಾಣಾ ಮು ಮಾ ಸಂ 118/2023 ರಲ್ಲಿ ಅಳವಡಿಸಿಕೊಂಡಿರುತ್ತೇನೆ. ಸ್ವತ್ತು ಅಮಾನತ್ತು ಮಹಜರ ವೇಳೆಯಲ್ಲಿ ಫೋಟೊಗಳನ್ನು ತೆಗೆಸಿರುತ್ತೇನೆ. ನಂತರ ಚಾಸಾ 4 ಮತ್ತು 5 ರವರ ಹೇಳಿಕೆಯನ್ನು ಪಡೆದಿರುತ್ತೇನೆ. ಅದೆ ದಿನ ಕುಶಾಲನಗರ ಸರಕಾರಿ ಆಸ್ಪತ್ರೆಯಿಂದ ಗಾಯದ ದೃಡಿಕರಣ ಪತ್ರವನ್ನು ಕಳುಹಿಸಿಕೊಟ್ಟಿದ್ದು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ದಿಃ 17.07.2023 ರಂದು ಚಾಸಾ 11 ರವರು ವಾಸದ ದೃಡೀರಕಣ ಪತ್ರವನ್ನು ಕಳುಹಿಸಿಕೊಟ್ಟಿದ್ದು ಅದನ್ನು ಕಡತಕ್ಕೆ ಅಳವಡಿಸಿಕೊಂಡಿರುತ್ತೇನೆ. ಅದೆ ದಿನ ಚಾಸಾ 13 ರವರಿಂದ ಕಲಂ 65 ಬಿ ಅಡಿಯಲ್ಲಿ ದೃಡೀಕರಣ ಪತ್ರವನ್ನು ಪಡೆದಿರುತ್ತೇನೆ.

ದಿಃ 19.07.2023 ರಂದು ತನಿಖೆಯು ಪೂರ್ಣಗೊಳಿಸಿ ನ್ಯಾಯಾಲಯಕ್ಕೆ ಅಂತಿಮ ವರದಿಯನ್ನು ಸಲ್ಲಿಸಿರುತ್ತೇನೆ.

ಸಾಕ್ಷಿಗೆ ದೂರನ್ನು ತೋರಿಸಲಸಾಗಿ ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೆೊೀಡಿ ಗುರುತಿ,ಸಿದ ಮೇರೆಗೆ ಸದರಿ ದೂರನ್ನು ಈಗಾಗಲೆ ನಿಪಿ 1 ಎಂದು ಗುರತಿಸಲಾಗಿದ್ದು , ಸಾಕ್ಷಿಯ ಸಹಿಯನ್ನು ನಿಪಿ1 ಬಿ ಎಂದು ಗುರತಿಸಲಾಯಿತು. ಸಾಕ್ಷಿಗೆ ಪ್ರ ವ ವ ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಪ್ರ ವ ವ ನ್ನು ನಿಪಿ 7

ಎಂದು ಗುರತಿಸಲಾಗಿದ್ದು , ಸಾಕ್ಷಿಯ ಸಹಿಯನ್ನು ನಿಪಿ 7ಎ ಎಂದು ಗುರತಿಸಲಾಯಿತು. ಸಾಕ್ಷಿಗೆ ಸ್ಥಳ ಪಂಚನಾಮೆಯನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಸ್ಥಳ ಪಂಚನಾಮೆಯನ್ನು ಈಗಾಗಲೆ ನಿಪಿ 2 ಎಂದು ಗುರತಿಸಲಾಗಿದ್ದು , ಸಾಕ್ಷಿಯ ಸಹಿಯನ್ನು ನಿಪಿ 8ಡಿ ಎಂದು ಗುರತಿಸಲಾಯಿತು. ಸಾಕ್ಷಿಗೆ ಕಚ್ಚಾ ನಕಾಶೆಯನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಕಚ್ಚಾ ನಕಾಶೆಯನ್ನು ನಿಪಿ 8 ಎಂದು ಗುರತಿಸಲಾಗಿದ್ದು , ಸಾಕ್ಷಿಯ ಸಹಿಯನ್ನು ನಿಪಿ 8ಎ ಎಂದು ಗುರತಿಸಲಾಯಿತು. ಅದೆ ವೇಳೆಯಲ್ಲಿ ತೆಗೆದ 3 ಚಾಯ ಚಿತ್ರವನ್ನು ತೋರಿಸಲಾಗಿ ಮತ್ತು ಅದಕ್ಕೆ ಅಳವಡಿಸಿರುವ ಸಿಡಿಯನ್ನು ಮತ್ತು ಅದಕ್ಕೆ ಹೊಂದಿಕೊಂಡಿರುವ ಕಲಂ 65 ಬಿ ಸರ್ಟಿಫಿಕೇಟನ್ನು ಸಾಕ್ಷಿಗೆ ತೋರಿಸಲಾಗಿ ಸಾಕ್ಷಿಯು ನೋಡಿ ಗುರುತಿಸಿದ ಮೇರೆಗೆ ಅವುಗಳನ್ನು ನಿಪಿ 9 ರಿಂದ 13 ಎಂದು ಗುರುತಿಸಲಾಯಿತು. ಸಾಕ್ಷಿಗೆ ಚಾಸಾ 11 ರವರಿಂದ ಪಡೆದುಕೊಂಡ ವಾಸದ ಮನೆ ದೃಡೀಕರಣ ಮತ್ತು ಸಾರ್ವಜನಿಕ ರಸ್ತ ಇರುವ ಬಗ್ಗೆ ದೃಡೀಕರಣ ಪತ್ರವನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಪತ್ರವನ್ನು ನಿಪಿ 14 ಎಂದು, ಸಾಕ್ಷಿಯ ಸಹಿಯನ್ನು ನಿಪಿ 14ಎ ಎಂದು ಗುರತಿಸಲಾಯಿತು. ಸಾಕ್ಷಿಗೆ ಗಾಯದ ದೃಡೀಕರಣ ಪತ್ರವನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಪತ್ರವನ್ನು ಈಗಾಗಲೆ ನಿಪಿ 6 ಎಂದು ಗುರತಿಸಲಾಗಿದ್ದು , ಸಾಕ್ಷಿಯ ಸಹಿಯನ್ನು ನಿಪಿ 6ಬಿ ಎಂದು ಗುರತಿಸಲಾಯಿತು. ಸಾಕ್ಷಿಗೆ ಸ್ವತ್ತು ಅಮಾನತ್ತು ಪಂಚನಾಮೆಯನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತನ್ನ ಸಹಿಯನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಪಂಚನಾಮೆಯನ್ನು ಈಗಾಗಲೆ ನಿಪಿ 5 ಎಂದು ಗುರತಿಸಲಾಗಿದ್ದು , ಸಾಕ್ಷಿಯ ಸಹಿಯನ್ನು ನಿಪಿ 5ಸಿ ಎಂದು ಗುರತಿಸಲಾಯಿತು. ಆ ಸಮಯದಲ್ಲಿ ತೆಗೆದ 2 ಭಾವ ಚಿತ್ರವನ್ನು ತೋರಿಸಲಾಗಿ ಸಾಕ್ಷಿಯ ಅದನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಫೋಟೋಗಳನ್ನು ನಿಪಿ 15 ಮತ್ತು 16 ಎಂದು ಗುರುತಿಸಲಾಯಿತು. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಮು ಮಾ ನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೆ ಮು

ಮಾ 1 ಎಂದು ಗುರುತಿಸಲಾಗಿರುತ್ತದೆ . ಸಾಕ್ಷಿಯು ಆರೋಪಿಯನ್ನು ನೋಡಿ ಗುರುತಿಸುತ್ತೇನೆ ಎಂದು ನುಡಿದರು. ಸಾಕ್ಷಿಗೆ ಚಾಸಾ 11 ಮತ್ತು 12 ರವರಿಗ ನೀಡಿದ ಮನವಿ ಪತ್ರಗಳನ್ನು ತೋರಿಸಲಾಗಿ ಸಾಕ್ಷಿಯು ಅದರಲ್ಲಿರುವ ತನ್ನ ಸಹಿಗಳನ್ನು ನೋಡಿ ಗುರುತಿಸಿದ ಮೇರೆಗೆ ಸದರಿ ಮನವಿ ಪತ್ರಗಳನ್ನು ನಿಪಿ 17 ಮತ್ತು 18 ಎಂದು, ಸಾಕ್ಷಿಯ ಸಹಿಯನ್ನು ನಿಪಿ 17ಎ ಮತ್ತು 18ಎ ಎಂದು ಗುರತಿಸಲಾಯಿತು.

**ಪಾಟೀ ಸವಾಲುಃ ಆರೋಪಿ ಪರ ಶ್ರೀ ಸಿ ಬಿ ಸಿ ವಕೀಲರಿಂದ**

ದಿಃ 23.06.2023 ರಂದು ನಾನು ರಾತ್ರಿ ಪಾಳ್ಯದಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ ಎಂದು ತೋರಿಸಲು ಯಾವುದೆ ದಾಖಲಾತಿಯನ್ನು ಹಾಜರುಪಡಿಸಿರುವುದಿಲ್ಲ. ನಾನು ಆಸ್ಪತ್ರೆಗೆ ಬೇಟಿ ನೀಡಿದಾಗ ನಿಪಿ 1 ನ್ನು ಇನ್ನು ಬರೆಯುತ್ತಿದ್ದರು. ನಾನು ಆಸ್ಪತ್ರೆಗೆ ಹೋದೆ ಎಂದು ಹೇಳಿದಾಗ ಚಾಸಾ 8 ರವರು ದೂರನ್ನು ಬರೆಯುತ್ತಿದ್ದರು. ನಾನು ಆಸ್ಪತ್ರೆಗೆ ಹೋದಾಗ ಗಾಯಾಳು ಚಾಸಾ 1 ರವರಿಗೆ ಪ್ರಜ್ಞೆ ಇತ್ತು . ನಾನು ಆಸ್ಪತ್ರೆಗೆ ಹೋದಾಗ ಚಾಸಾ 1 , ಅವರ ಹೆಂಡತಿ ಚಾಸಾ 8 ರವರು ಮತ್ತು ಚಾಸಾ 1 ರವರ ಅಣ್ಣ ಚಾಸಾ 10 ರವರು ಆಸ್ಪತ್ರೆಯಲ್ಲಿ ಇದ್ದರು. ಚಾಸಾ 1 ರವರು ಒಳ ರೋಗಿಯಾಗಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತಿತದ್ದರು ಎಂದು ನಾನು ಆಸ್ಪತ್ರೆಯಲ್ಲಿ ಯಾವುದೆ ದಾಖಲಾತಿಯನ್ನು ಪಡೆದುಕೊಂಡಿರುವುದಿಲ್ಲ ಆದರೆ ಆಸ್ಪತ್ರೆಯಿಂದ ನನಗೆ ಮಾಹಿತಿ ಬಂದಿರುತ್ತದೆ . ಸದರಿ ಪ್ರಕರಣದ ತನಿಖೆಯನ್ನು ನಾನೆ ಮಾಡಿರುತ್ತೇನೆ . ಚಾಸಾ 1 ರವರು ಒಳರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿರುವ ಬಗ್ಗೆ ಯಾವುದಾದರು ದಾಖಲಾತಿಯನ್ನು ಪಡೆದುಕೊಂಡಿದ್ದಿರಾ ಎಂದರೆ ಸಾಕ್ಷಿಯು ಪಡೆದುಕೊಂಡಿರುವುದಿಲ್ಲ ಎಂದು ನುಡಿದರು.

ಚಾಸ 1 ರವರು ಮಡಿಕೇರಿ ಜಿಲ್ಲಾ ಆಸ್ಪತ್ರೆಗೆ ಹೋಗಿ ಚಿಕಿತ್ಸೆ ಪಡೆದಿರುವುದಕ್ಕೆ ನಾನು ಯಾವುದೆ ದಾಖಲಾತಿಯನ್ನು ಪಡೆದಿರುವುದಿಲ್ಲ. ಮಹಜರ ಮಾಡುವ ಪೂರ್ವದಲ್ಲಿ ಚಾಸಾ 1ರವರೆ ಠಾಣೆಗೆ ಬಂದು ಮರು ಹೇಳಿಕೆ ನೀಡಿರುತ್ತಾರೆ. ಅದೆ ದಿನ ನಾನು ಮಹಜರಗೆ ಹೋಗಿರುತ್ತೇನೆ.

ಮರು ಹೇಳಿಕೇಯಲ್ಲಿ ನೀಡಿರುವ ಸ್ಕೂಟರ ಸಂಖ್ಯೆಯನ್ನು ಮಹರಿನಲ್ಲಿ ತೋರಿಸಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ತೊಂದರೆ ಇರಲಿಲ್ಲ ಎಂದು ನುಡಿದರು. ನಾನು ಪಂಚರನ್ನು ಅರಿಶಿಣಗುಪ್ಪೆ ಗ್ರಾಮದಿಂದ ಕರೆಸಿಕೊಂಡಿರುತ್ತೇನೆ. ನಾನು ಘಟನಾ ಸ್ಥಳಕ್ಕೆ ಹೋದ ಮೇಲೆ ಪಂಚರನ್ನು ಕರೆಸಿಕೊಂಡಿರುತ್ತೇನೆ. ಕೃತ್ಯ ನಡೆದ ಸ್ಥಳಕ್ಕೆ ನಾನು ಮತ್ತು ಚಾಸಾ 13 ರವರು ಒಟ್ಟಿಗೆ ಹೋಗಿರುತ್ತೇವೆ . ನಾನು ಮಹಜರಗೆ ಹೋದ ವೇಳೆಯಲ್ಲಿ ಚಾಸಾ 10 ರವರನ್ನು ಬರಮಾಡಿಕೊಂಡಿರುವುದಿಲ್ಲ. ಅವರನ್ನು ಕರೆಸಲು ಯಾವುದೆ ತೊಂದರೆ ಇರಲಿಲ್ಲ ಎಂದರೆ ಸರಿ .

ಘಟನಾ ಸ್ಥಳದಿಂದ 35 ಅಡಿ ದೂರದಲ್ಲಿ ಚಾಸಾ 1 ರವರ ಮನೆ ಇದ್ದು 10 ಅಡಿ ದೂರದಲ್ಲಿ ಆರೋಪಿಯ ಮನೆ ಇರುತ್ತದೆ . ಮಹಜರ ಬರೆಯುವ ವೇಳೆಯಲ್ಲಿ ಆರೋಪಿಯ ಮನೆಯಲ್ಲಿ ಯಾರು ಯಾರು ಇದ್ದರು ಎಂದು ತಿಳಿದುಕೊಂಡಿರುವುದಿಲ್ಲ. 10 ಅಡಿ ದೂರದಲ್ಲಿದ್ದ ಆರೋಪಿಯ ಮನೆ ಯಿಂದ ಮಹರಜ ಕ್ರಮ ಜರುಗಿಸ ಬೇಕಾದರೆ ಯಾರನ್ನಾದರೂ ಕರೆಯಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ತೊಂದರೆ ಇರಲಿಲ್ಲ ಎಂದು ನುಡಿದರು. ಕೃತ್ಯ ನಡೆದ ಸ್ಥಳ ರಸ್ತೆಯಾಗಿರುತ್ತದೆ ಆದರೆ ಅದು ಗ್ರಾಮ ರಸ್ತೆಯಾಗಿರುವುಂದರಿಂದ ಅಷ್ಟಾಗಿ ಯಾರು ಹೋಡಾಡುತ್ತಿರಲಿಲ್ಲ . ನಾನು ಚಾಸಾ 1 ರವರನ್ನು ಆಸ್ಪತ್ರೆಯಲ್ಲಿ ನೋಡಿದಾಗ ಅವರಿಗ ರಕ್ತಗಾಯವಾಗಿತ್ತು . ನಾನು ನೋಡಿದಾಗ ಚಾಸಾ 1 ರವರ ಬಟ್ಟೆಯ ಮೇಲೆ ಯಾವುದೆ ರಕ್ತ ಕಲೆಗಳು ಇರಲಿಲ್ಲ . ಘಟನಾ ಸ್ಥಳದಲ್ಲಿ ರಕ್ತದ ಕಲೆಗಳನ್ನು ನಾನು ನೋಡಿರುವುದಿಲ್ಲ. ನಿಪಿ 9 ರಿಂದ 11 ಚಾಯಚಿತ್ರಗಳನ್ನು ನನ್ನ ನಿರ್ದೇಶನ ದ ಮೇರೆಗೆ ಚಾಸಾ 13 ರವರು ತೆಗೆದಿರುತ್ತಾರೆ. ನಿಪಿ 9 ನ್ನು ಮೊದಲು ತೆಗೆದಿರುತ್ತೇವೆ ನಿಪಿ 10 ಮತ್ತು 11 ನ್ನು ನಂತರ ತೆಗೆದಿರುತ್ತೆವೆ .

ಕೃತ್ಯ ಸ್ಥಳದಲ್ಲಿದ್ದ ಎಂ ಒ 1 ನ್ನು ನನಗೆ ತೆಗೆದು ಕೊಟ್ಟಿರುತ್ತಾರೆ . ನಿಪಿ 9 ರಲ್ಲಿ ಕಾಣುತ್ತಿರುವ ಜಾಗ ಕೃತ್ಯ ಸ್ಥಳವಾಗಿರುತ್ತದೆ . ನಿಪಿ 9 ರಲ್ಲಿ ಕಲ್ಲು ಬಿದ್ದಿರುವುದು ಕಾಣುತ್ತಿಲ್ಲ ಎಂದರೆ ಸರಿ. ಆ ನಂತರ ತೆಗೆದ ಫೋಟೊದಲ್ಲಿ ಕಲ್ಲುಗಳು ಇರುವುದು ಕಾಣುತ್ತಿದೆ ಎಂದರೆ ಸರಿ . ನಾನು ನನ್ನ ತನಿಖಾ ಕಾಲದಲ್ಲಿ ಚಾಸಾ 1 ರವರ ಮನೆಯಲ್ಲಾಗಲಿ ಅಥವಾ ಆರೋಪಿಯ ಮನೆಯಲ್ಲಾಗಲಿ ಸಿಸಿಟಿವಿ ಕ್ಯಾಮೇರಾ ಇರುವ ಬಗ್ಗೆ ಪರಿಶೀಲನೆ ಮಾಡಿರುವುದಿಲ್ಲ. ನಿಪಿ 8 ರಲ್ಲಿ ಎಂ ಒ 1 ಇರುವ ಬಗ್ಗೆ ತೋರಿಸಿರುವುದಿಲ್ಲ. ಯಾವ ರೀತಿಯ ಕಲ್ಲು ಎಂದು ನಿಪಿ 2 ರಲ್ಲಿ ಬರೆದಿರುತ್ತೇನೆ . ಚಾಸಾ 1 ರವರ ಮೇಲೆ ಸುಮಾರು ಪ್ರಕರಣಗಳು ನಮ್ಮ ಠಾಣೆಯಲ್ಲಿ ದಾಖಲು ಆಗಿರುತ್ತದೆ ಎಂದರೆ ಗೊತ್ತಿಲ್ಲ. ಕೃತ್ಯ ನಡೆದ ದಿನದಂದು ಚಾಸಾ 1 ರವರು ಬೈಕಿನಿಂದ ಬಿದ್ದು ಗಾಯ ಮಾಡಿಕೊಂಡ ಬಗ್ಗೆ ನಾನು ತಿಳಿದುಕೊಂಡಿರುವುದಿಲ್ಲ.

ಚಾಸಾ 1 ರವರು ಕೊಟ್ಟ ಸುಳ್ಳು ದೂರಿಗೆ ಪೂರಕವಾಗಿ ಸುಳ್ಳು ದಾಖಲಾತಿಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಆ ದಿನ ಚಾಸಾ 1 ಮತ್ತು ಆರೋಪಿಗೂ ಯಾವುದೆ ಗಲಾಟೆ ನಡೆದಿರುವುದಿಲ್ಲ ನಾನು ಸುಳ್ಳು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಚಾಸಾ 1 ರವರ ಮನೆಯವರನ್ನು ಕೃತ್ಯ ನಡೆದ ಸ್ಥಳಕ್ಕೆ ಮಹಜರ ವೇಳೆಯಲ್ಲಿ ಕರೆಯಿಸಿರುವುದಿಲ್ಲ ಆ ನಂತರ ಅವರನ್ನು ಕರೆಯಿಸಿ ಅವರ ಹೇಳಿಕೆಯನ್ನು ಪಡೆದುಕೊಂಡಿರುತ್ತೆನೆ. ಚಾಸಾ 1 ರವರು ಅವರೆ ಸ್ವಂತ ಗಾಡಿಯಿಂದ ಬಿದು ಪೆಟ್ಟು ಮಾಡಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಈ ಪ್ರಕರಣಕೊಸ್ಕರ ಗಾಯದ ಪ್ರಮಾಣ ಪತ್ರವನ್ನು ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ನಾನು ಯಾವುದೆ ಸಾಕ್ಷಿದಾರರ ಹೇಳಿಕೆಯನ್ನು ಪಡೆದಿರುವುದಿಲ್ಲ ಹಾಗೂ ನೋಟಸನ್ನು ಜಾರಿ ಮಾಡಿರುವುದಿಲ್ಲ ಎಂದರೆ ಸರಿಯಲ್ಲ . ಅದೆ ರೀತಿ ನಾನು ಸ್ವಇಚ್ಛಾ ಹೇಳಿಕೆಯನ್ನು ನಾನೆ ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಮು ಮಾ 1 ನ್ನು ಚಾಸಾ 1 ರವರು ಠಾಣೆಗೆ

ತಂದು ಹಾಜರು ಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಆರೋಪಿ ಯಾವುದೆ ಕೃತ್ಯವನ್ನು ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ 2 , 6 , 8 , 9 ರಿಂದ 18 ದಾಖಲಾತಿಗಳನ್ನು ನಾನು ಪ್ರಕರಣಕೊಸ್ಕರ ಸೃಷ್ಟಿಸಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಅದೆ ರೀತಿ ನಿಪಿ 2 ಮತ್ತು 8 ನ್ನು ಠಾಣೆಯಲ್ಲಿ ಸೃಷ್ಟಿ ಸಿ ಪಂಚರ ಸಹಿಗಳನ್ನು ಠಾಣೆಯಲ್ಲಿ ಪಡೆದುಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಚಾಸಾ 1 ರವರು ಕೊಟ್ಟ ಸುಳ್ಳು ದೂರಿಗೆ ಪೂರಕವಾಗಿ ಸುಳ್ಳು ಪ್ರಕರಣವನ್ನು ದಾಖಲಿಸಿ ಸುಳ್ಳು ದೊಷರೋಪಣಾ ಪಟ್ಟಿಯನ್ನು ಸಲ್ಲಿಸಿರುತ್ತೇನೆ ಎಂದರೆ ಸರಿಯಲ್ಲ .

**ಮರು ವಿಚಾರಣೆ ಇಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಗಿದೆ.)

ಓದಿ ಹೇಳಿ ಕೇಳಿ ಸರಿ ಇದೆ.

ಸಹಿ/ –

ಪ್ರ ದ ನ್ಯಾದಂ, ಕುಶಾಲನಗರ.